# ಸರ್ವೋದಯದ ಸುಂದರ ಕನಸು

ಗಾಂಧೀಜೀಯವರು ಹುತಾತ್ಮರಾದ ದಿನವನ್ನು 'ಸರ್ವೋದಯ ದಿನ'ವೆಂದು ಕರೆಯಲಾಗುತ್ತಿದೆ, ಗಾಂಧೀಜೀಗೆ ಅತ್ಯಂತ ಪ್ರಿಯವಾದ ಸರ್ವೋದಯ ಸಿದ್ಧಾಂತವನ್ನು ಕುರಿತು ಚಿಂತನೆ ಮಾಡಬೇಕೆನ್ನುವುದು ಇದರ ಹಿಂದಿರುವ ಉದ್ದೇಶವಿದ್ದೀತು, ಗಾಂಧೀ ಯುಗದಲ್ಲಿ ವ್ಯಾಪಕ ಚಲಾವಣೆಯಲ್ಲಿದ್ದ– ಈಗ ಸಾಕಷ್ಟು ಸವಕಲಾಗಿರುವ– ಸತ್ಯಾಗ್ರಹ, ಅಸಹಕಾರ, ಹರಿಜನೋದ್ಧಾರ ಇತ್ಯಾದಿಗಳ ಗುಂಪಿನಲ್ಲಿದ್ದ ಇನ್ನೊಂದು ಪ್ರಮುಖ ಪದವೆಂದರೆ 'ಸರ್ವೋದಯ' ಎಂಬುದು. ಸರ್ವೋದಯವೆಂಬುದು ಯಾವುದೇ ಬಗೆಯ ಶ್ರೇಷ್ಠ ನಿಕೃಷ್ಟ ಎಂಬ ಸ್ತರ ವ್ಯತ್ಯಾಸಗಳಿಲ್ಲದ, ಯಾರ ಶೋಷಣೆಗೂ ಅವಕಾಶವಿಲ್ಲದ, ಎಲ್ಲರ ಏಳಿಗೆಗೂ ಆಸ್ಪದವಿರುವ, ಒಟ್ಟಿನಲ್ಲಿ ಸರ್ವಹಿತವನ್ನೇ ಗುರಿಯಾಗಿಸಿಕೊಂಡಿರುವ ಒಂದು ಅದ್ಭುತ ಪರಿಕಲ್ಪನೆ. ಗಾಂಧೀಜೀ ತಮ್ಮ ಕನಸಿನ ಭಾರತದಲ್ಲಿ ಈ ಸರ್ವೋದಯ ಸಿದ್ಧಾಂತ ಅಕ್ಷರಶಃ ಅನುಷ್ಠಾನಕ್ಕೆ ಬರುವುದೆಂದು ನಂಬಿದ್ದರು. 'ನಿಜವಾದ ಪ್ರಜಾತಂತ್ರದ ನಮ್ಮ ಕನಸು ನನಸಾಗುವುದನ್ನು ಕಾಣುವುದೆಂದರೆ ಅತ್ಯಂತ ಕೊನೆಯಲ್ಲಿರುವ ಕನಿಷ್ಠ ಭಾರತೀಯ ಪ್ರಜೆಯೂ ನಾಡಿನ ಅತ್ಯುನ್ನತರ ಜೊತೆಗೆ ಸಮ ಸಮನಾಗಿ ದೇಶವನ್ನು ಆಳುವವನೆಂದಾಗಬೇಕು... ಅಲ್ಲಿ ಯಾರು ಯಾರನ್ನೂ ಅಸ್ಪೃಶ್ಯ ಎನ್ನುವುದಿಲ್ಲ; ದುಡಿಯುವ ಕೂಲಿಗಾರ, ಶ್ರೀಮಂತ ಬಂಡವಾಳಗಾರ– ಇವರಿಬ್ಬರಲ್ಲೂ ವ್ಯತ್ಯಾಸವಿರುವುದಿಲ್ಲ; ಬೌದ್ಧಿಕ ಮತ್ತು ದೈಹಿಕ ಪರಿಶ್ರಮದ ನಡುವೆ ಯಾವ ಭೇದವೂ ಇರುವುದಿಲ್ಲ...' ಹೀಗೆಂದು ತಮ್ಮ ಸರ್ವೋದಯ ಪರಿಕಲ್ಪನೆಯನ್ನು ಕುರಿತು ಗಾಂಧೀಜಿ 'ಹರಿಜನ' ಪತ್ರಿಕೆಯಲ್ಲಿ ಬರೆದಿದ್ದರು.

ಗಾಂಧೀಜೀಗೆ ಸರ್ವೋದಯ ತತ್ತ್ವವನ್ನು ಕುರಿತು ಚಿಂತಿಸಲು ಮೂಲ ಪ್ರೇರಣೆ ಜಾನ್ ರಸ್ಕಿನ್ ಅವರ 'ಅನ್ ಟು ದಿಸ್ ಲಾಸ್ಟ್' ಎಂಬ ಪುಸ್ತಕ. ದಕ್ಷಿಣ ಆಫ್ರಿಕಾದಲ್ಲಿ ಜೋಹಾನ್ಸ್‌ಬರ್ಗ್‌ನಿಂದ ದರ್ಬಾನ್‌ಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ ಅವರು ಆ ಪುಸ್ತಕವನ್ನು ಅತ್ಯಂತ ತನ್ಮಯತೆಯಿಂದ ಓದಿ, ಅದರಿಂದ ಗಾಢವಾಗಿ ಪ್ರಭಾವಿತರಾದರು. ತಾವು ಆ ಮೊದಲೇ ರೂಪಿಸಿಕೊಂಡಿದ್ದ ಕೆಲವು ನಂಬಿಕೆಗಳು ಅದರಲ್ಲಿ ಪ್ರತಿಬಿಂಬಿತವಾಗಿದ್ದುದನ್ನು ಗಾಂಧೀಜಿ ಕಂಡುಕೊಂಡರು. ಬಹುಜನರ ಬಹುಹಿತವೇ ಮುಖ್ಯ ಎಂಬ ತತ್ತ್ವಕ್ಕಿಂತಲೂ ಸರ್ವರ ಬಹುಹಿತದಲ್ಲಿಯೇ ಎಲ್ಲರ ಹಿತವೂ ಅಡಗಿದೆ ಎಂಬ ಸತ್ಯವನ್ನು ಗಾಂಧೀಜಿ ರಸ್ಕಿನ್‌ರ ಪುಸ್ತಕದ ಓದಿನಿಂದ ದೃಢಪಡಿಸಿಕೊಂಡರು, ಅಲ್ಪ ಸಂಖ್ಯಾತರ ಹಿತವನ್ನು ಬಲಿಕೊಟ್ಟು ಬಹುಸಂಖ್ಯಾತರ ಹಿತವನ್ನು ಸಾಧಿಸಬೇಕೆನ್ನುವುದು ಹೃದಯಹೀನ ಸಿದ್ಧಾಂತವೆಂಬ ರಸ್ಕಿನ್‌ರ ಅಭಿಪ್ರಾಯ ಗಾಂಧೀಜೀಗೆ ಸಂಪೂರ್ಣ ಒಪ್ಪಿಗೆಯಾಯಿತು. 'ಅನ್ ಟು ದಿಸ್ ಲಾಸ್ಟ್' ಎಂಬುದರ ಸಾರಸಂಗ್ರಹವನ್ನು ಅವರು 'ಸರ್ವೋದಯ' ಎಂಬ ಶೀರ್ಷಿಕೆಯಲ್ಲಿ ಗುಜರಾತಿ ಭಾಷೆಗೆ ಅನುವಾದಿಸಿದರು.

ಸರ್ವೋದಯ ಸಿದ್ಧಾಂತದಲ್ಲಿ ಗಾಂಧೀಜೀ ಪ್ರತಿಪಾದಿಸಿರುವುದು ಇಡೀ ಸಮಷ್ಟಿಯ ಹಿತಸಾಧನೆ ಹಾಗೂ ಸಮಾನತೆಯ ಪರಿಕಲ್ಪನೆ, ಮನುಷ್ಯ ಸಮಾಜದಲ್ಲಿ ಆರ್ಥಿಕ ಅಸಮಾನತೆ, ಸಾಮಾಜಿಕ ಅಸಮಾನತೆ ಹಾಗೂ ಬೌದ್ಧಿಕ ಅಸಮಾನತೆ– ಹೀಗೆ ಮೂರು ನೆಲೆಗಳಲ್ಲಿ ಮೇಲು ಕೀಳು ಎಂಬ ವ್ಯತ್ಯಾಸ ಕಾಣಿಸಿಕೊಳ್ಳುತ್ತದೆ.. ಗಾಂಧೀಜೀಯವರ ಸರ್ವೋದಯ ತತ್ತ್ವ ಮನುಷ್ಯನನ್ನು ಆರ್ಥಿಕ, ಸಾಮಾಜಿಕ ಮತ್ತು ಬೌದ್ಧಿಕ ಮಾನದಂಡಗಳಿಂದ ಅಳೆದು, ಶ್ರೇಷ್ಠ ಕನಿಷ್ಠ ಎಂದು ವರ್ಗೀಕರಿಸುವುದನ್ನು ವಿರೋಧಿಸುತ್ತದೆ. ಶ್ರೀಮಂತನಿಗಿಂತ ಬಡವ ನಿಕೃಷ್ಟನಲ್ಲ; ಜಾತಿಯಿಂದಾಗಿ ಯಾರೂ ಮೇಲಲ್ಲ, ಕೀಳೂ ಅಲ್ಲ; ಬೌದ್ಧಿಕ ಕಾರಣದಿಂದ ಅಥವಾ ವೃತ್ತಿಯ ಕಾರಣದಿಂದ ಯಾರೂ ಶ್ರೇಷ್ಠರಾಗುವುದಿಲ್ಲ, ನಿಕೃಷ್ಟರಾಗುವುದೂ ಇಲ್ಲ. 'ವಕೀಲನ ಕೆಲಸದ ಬೆಲೆ, ಕ್ಷೌರಿಕನ ಕೆಲಸದ ಬೆಲೆ ಎರಡೂ ಸಮಾನವಾದುದು, ಏಕೆಂದರೆ ದುಡಿದು ಹೊಟ್ಟೆ ತುಂಬಿಸಿಕೊಳ್ಳುವ ಹಕ್ಕು ಎಲ್ಲರಿಗೂ ಉಂಟು, ಅದರಲ್ಲೂ ದೈಹಿಕ ಶ್ರಮಜೀವನವೇ ನಿಜಕ್ಕೂ ಸಾರ್ಥಕ ಜೀವನ' ಎಂಬುದು ಗಾಂಧೀಜೀಯವರ ಸರ್ವೋದಯ ತತ್ತ್ವದ ತಿರುಳಾಗಿತ್ತು.

ಸರ್ವರ ಹಿತಕಲ್ಪನೆಯೇ ಪ್ರಧಾನ ಧ್ವನಿಯಾಗಿರುವ ಸರ್ವೋದಯ ಸಿದ್ಧಾಂತದಲ್ಲಿ ಗಾಂಧೀಜೀ ಪ್ರತಿಪಾದಿಸುತ್ತಿದ್ದ ಸರ್ವಧರ್ಮ ಸಮಭಾವ, ಅಸ್ಪೃಶ್ಯತಾ ನಿವಾರಣೆ, ರಾಮರಾಜ್ಯ, ಅಧಿಕಾರ ವಿಕೇಂದ್ರೀಕರಣ, ಮನುಷ್ಯನ ಮೂಲಭೂತ ಘನತೆಯಲ್ಲಿನ ವಿಶ್ವಾಸ– ಇತ್ಯಾದಿ ಚಿಂತನೆಗಳೆಲ್ಲವೂ ಅಂತರ್ಗತವಾಗಿವೆ ಎನ್ನಬಹುದು. ಸರ್ವೋದಯ ಸಿದ್ಧಾಂತದಲ್ಲಿ ಸ್ವಾರ್ಥ ದುರಾಶೆಗಳಿಗೆ, ಅನಾರೋಗ್ಯಕರ ಸ್ಪರ್ಧೆಗಳಿಗೆ, ಸಹಜೀವಿಯ ಶೋಷಣೆಗೆ ಅವಕಾಶವಿಲ್ಲ. ಅದು 'ಮನುಷ್ಯ ಜಾತಿ ತಾನೊಂದೆ...' ಎಂದು ಸಾರುತ್ತದೆ; 'ಆತ್ಮವತ್ ಸರ್ವಭೂತೇಯ' ಎಂದು ಭಾವಿಸಿ, ಎಲ್ಲರೊಂದಿಗೆ ಬಾಳಿ ಬೆಳೆಯುವ ಸಮಷ್ಟಿ ಪ್ರಜ್ಞೆಯನ್ನು ಪ್ರೋತ್ಸಾಹಿಸುತ್ತದೆ. ಆದರೆ ಅದನ್ನು ವ್ಯಾವಹಾರಿಕವಾಗಿ ಅನುಷ್ಠಾನಗೊಳಿಸುವುದು ಮಾತ್ರ ಕಷ್ಟ ಸಾಧ್ಯ. ಆದ್ದರಿಂದಲೇ 'ಸರ್ವೋದಯ'ವೆಂಬುದು ಪ್ರಸ್ತುತ ಕಾಲಘಟ್ಟದಲ್ಲಿ ಒಂದು ಸುಂದರ ಕನಸಾಗಿ ಮಾತ್ರ ಉಳಿದುಕೊಂಡಿದೆ!

■ ವೈನತೇಯ

## ಮಾತೇ ಮುತ್ತು

★ ಕಾಮನಿಂದ ಪೀಡಿತನಾದವನಿಗೆ 'ಜಡ' ಮತ್ತು 'ಚೇತನ'ದಲ್ಲಿ ಯಾವುದೇ ಭೇದ ಕಾಣಿಸದು.

–ಕಾಳಿದಾಸ

★ ರೂಪ ಕಣ್ಣುಗಳಿಗೆ ಸೀಮಿತ, ಗುಣ ಆತ್ಮದವರೆಗೆ ತಲುಪುವ ಸಾಧನ.

–ತ್ರಿವೇಣಿ

★ ಮನುಷ್ಯ ಈ ಪ್ರಪಂಚ ಎಂಬ ರಂಗಭೂಮಿಯ ಮೇಲೆ ನಟಿಸಲು ಬರುತ್ತಾನೆ. ಮನಸ್ಸಿನ ಪ್ರವೃತ್ತಿಗೆ ಅನುಗುಣವಾಗಿ ಸಂಭಾಷಣೆ ಹೇಳುತ್ತಾನೆ– ಇದೇ ಮನುಷ್ಯನ ಜೀವನ.

–ಟಿ.ಪಿ.ಕೈಲಾಸಂ

★ ಒಂದು ಕಾಸು ದಾನ ಮಾಡುವವನನ್ನೂ ನಾವು ಗೌರವಿಸಬೇಕು. ಆದರೆ ದೊಡ್ಡ ಸಂಪತ್ತಿನ ಒಡೆಯನಾದ ಜಿಪುಣನನ್ನು ಗೌರವಿಸುವ ಅಗತ್ಯವಿಲ್ಲ.

–ಪಂಚತಂತ್ರ

★ ಕಾಯ್ದೆ ಬಡವರ ಪರ ಇದ್ದರೂ– ಶ್ರೀಮಂತರು ಅದನ್ನು ಬೆರಳ ತುದಿಯಲ್ಲಿ ಆಡಿಸಿ, ಅದು ನಿಷ್ಪ್ರಯೋಜಕ ಅನ್ನುವಂತೆ ಮಾಡುತ್ತಾರೆ.

–ಗೋಲ್ಡ್‌ಸ್ಮಿತ್

★ ಯಶಸ್ಸು ಎಂದೂ ಅಂತಿಮವಾದದ್ದಲ್ಲ, ವೈಫಲ್ಯವೂ ಅಂತಿಮವಲ್ಲ. ಗಣನೆಗೆ ಬರುವುದು ಶೌರ್ಯ ಮಾತ್ರ.

–ಚರ್ಚಿಲ್

★ ಯಾವುದಕ್ಕೂ ಸಿದ್ಧವಾಗಿರುವವನಿಗೆ ಅವಕಾಶಗಳು ಹುಡುಕಿಕೊಂಡು ಬರುತ್ತವೆ.

–ಇಂಗರ್ ಸಾಲ್

★ ಲೋಕೋಪಕಾರದ ಜಾಡಿನಲ್ಲಿ ನಾವು ನಡೆದರೆ ಅದರಿಂದ ನಾವು ಬಯಸಲಿ ಬಿಡಲಿ, ನಮಗೂ ಅಷ್ಟಿಷ್ಟು ಒಳ್ಳೆಯದಾಗುತ್ತದೆ.

–ತ.ರಾ.ಸು.

★ ಏಳಿಗೆ ಹೊಂದಲಿಚ್ಛಿಸುವವರು ಕೈಜೋಡಿಸಬೇಕು, ಶಪಥ ಮಾಡಬೇಕು, ಸಾಂತ್ವನಪಡಿಸಬೇಕು, ಕಣ್ಣೀರು ಹಾಕಬೇಕು.

–ಮಹಾಭಾರತ

★ ಕಾಮಪಿಪಾಸು ಸತ್ಯದಿಂದ ದೂರ ಸರಿಯುತ್ತಾನೆ. ಮಹತ್ವಾಕಾಂಕ್ಷೆಯಲ್ಲಿ ಸಿಲುಕಿ ಪರಲೋಕದ ಚಿಂತೆಯನ್ನು ಮರೆಯುತ್ತಾನೆ.

–ಹಜರತ್ ಮೊಹಮ್ಮದ್

★ ನಾವು ಏನು ಮಾಡುತ್ತೇವೆಯೋ ಅಷ್ಟಕ್ಕೆ ಮಾತ್ರ ನಾವು ಜವಾಬ್ದಾರರಲ್ಲ, ಯಾವುದನ್ನು ಮಾಡುವುದಿಲ್ಲವೋ ಅದಕ್ಕೂ ನಾವೇ ಜವಾಬ್ದಾರರು!

–ಅ್ಯನಿಬೆಸೆಂಟ್

★ ಧೈರ್ಯವಂತ ಎಂದೂ ಕಷ್ಟಗಳಿಗೆ ಹೆದರುವುದಿಲ್ಲ, ಸಫಲತೆ ಅವನ ಪಾದದ ಬುಡದಲ್ಲಿರುತ್ತದೆ.

–ಅಜ್ಞಾತ